

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಿರಿವಂತರಿಗೆ ಹರಾಜಾಗುತ್ತಿರುವ ಪ್ರಜಾಪ್ರಭುತ್ವ!

ಅಕ್ಕ ಸಮ್ಮೇಳನದ ನಂತರ ಸ್ವದೇಶಕ್ಕೆ ಹಿಂದಿರುಗುವ ಮೊದಲು ಜಗತ್ತಿನ 'ಹಿರಿಯಣ್ಣ'ನ ರಾಜಕೀಯ ಕುರಿತು ಎರಡು ಮಾತುಗಳು: 'ಅಮೇರಿಕೆಯ ರಾಜಕೀಯ ಒಂದು ತಮಾಷೆ' (American Politics is a joke) ಎಂದು ಅನೇಕ ಅಮೇರಿಕನ್ನರ ಅಂಬೋಣ. ಇಲ್ಲಿಯ ರಾಜಕೀಯ ಒಂದು ದೊಂಬರಾಟ (circus) ಎನ್ನುವವರೂ ಇದ್ದಾರೆ. ಆದರೆ ಈ ಮಾತುಗಳು ಅಮೇರಿಕೆಯ ರಾಜಕೀಯಕ್ಕಿಂತ ನಮ್ಮ ದೇಶದ ರಾಜಕೀಯಕ್ಕೆ ಹೆಚ್ಚು ಅನ್ವಯಿಸುತ್ತವೆಯೆಂದು ತೋರುತ್ತದೆ. ಜನರ ಕೊರಳಿಗೆ ಸುಳ್ಳಿನ ಸರಮಾಲೆ ಹಾಕಿ ನಂಬಿಸಿ ಅವರ ಕೊರಳನ್ನು ಕೊಯ್ಯುವ ವಂಚಕರ ಆಟವೇ ರಾಜಕೀಯ. ಅಂತಹ ರಾಜಕೀಯ ಅಮೇರಿಕೆಯಲ್ಲಿ ನಡೆಯುವುದು ಕಷ್ಟ.

ಇನ್ನೆರಡು ತಿಂಗಳಲ್ಲಿ ಅಮೇರಿಕೆಯ ಅಧ್ಯಕ್ಷರ ಚುನಾವಣೆ. ಸಾಮಾನ್ಯವಾಗಿ ಸೆನೆಟರ್‌ಗಳು ಅಧ್ಯಕ್ಷರಾಗಿ ಆಯ್ಕೆಯಾಗುವುದು ಅಪರೂಪ. ಅಮೇರಿಕಾದ ಸುದೀರ್ಘ ಇತಿಹಾಸದಲ್ಲಿ ಸೆನೆಟರ್ ಆಗಿದ್ದು ಅಧ್ಯಕ್ಷರಾಗಿ ಆಯ್ಕೆಯಾದವರು ಮೂರೇ ಮೂರು ಜನ. ಅವರಲ್ಲಿ ಜಾನ್ ಎಫ್ ಕೆನೆಡಿ ನಂತರ ಈಗಿನ ಅಧ್ಯಕ್ಷರಾದ ಡೆಮೋಕ್ರಾಟಿಕ್ ಪಕ್ಷದ ಬರಾಕ್ ಒಬಾಮಾ ಮೂರನೆಯವರು. ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸಲಿದ್ದಾರೆ. ಅವರ ಪ್ರತಿಸ್ಪರ್ಧಿಯೇ ರಿಪಬ್ಲಿಕನ್ ಪಕ್ಷದ ಮಿಟ್ ರಾಮ್ನಿ (Mitt Romney). ಆದಾಯ ತೆರಿಗೆ ವಿಚಾರದಲ್ಲಿ ರಿಪಬ್ಲಿಕನ್ ಪಕ್ಷ ಸಿರಿವಂತರ ಪರ ಎಂಬ ಆಪಾದನೆ ಆ ಪಕ್ಷದವರ ಮೇಲಿದೆ. ಅದಕ್ಕೆ ಅಪವಾದವಾಗಿ ತಾನು ಅಧಿಕಾರಕ್ಕೆ ಬಂದರೆ ಸಿರಿವಂತರಿಗೆ ಹೆಚ್ಚಿನ ಆದಾಯ ತೆರಿಗೆ ವಿನಾಯಿತಿಯನ್ನು ಕೊಡುವುದಿಲ್ಲವೆಂದೂ ಹಾಗೂ ಮಧ್ಯಮ ವರ್ಗದವರ ತೆರಿಗೆ ಭಾರವನ್ನು ಕಡಿಮೆಮಾಡುವುದಾಗಿಯೂ ಮಿಟ್ ರಾಮ್ನಿ ತನ್ನ ಚುನಾವಣಾ ಭಾಷಣಗಳಲ್ಲಿ ಜನರಿಗೆ ಭರವಸೆಯನ್ನು ನೀಡುತ್ತಿದ್ದಾರೆ. ಈಗಿನ ಅಧ್ಯಕ್ಷ ಒಬಾಮಾ ಜಾರಿಗೆ ತಂದ ಕಡ್ಡಾಯ ಆರೋಗ್ಯವಿಮೆ ವಿಧಾಯಕ ದೇಶಾದ್ಯಂತ ತುಂಬಾ ಚರ್ಚೆಗೆ ಒಳಗಾಗಿದ್ದು ಇಲ್ಲಿಯ ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಈ ಹಿನ್ನೆಲೆಯಲ್ಲಿ ಬಹುಮಟ್ಟಿಗೆ ಒಬಾಮಾ ಅವರೇ ಪುನರಾಯ್ಕೆಗೊಳುತ್ತಾರೆಂಬ ದಟ್ಟ ವದಂತಿ ಇದ್ದರೂ, ಚುನಾವಣಾ ಸಮೀಕ್ಷೆಯ ಪ್ರಕಾರ ಅವರ ಪ್ರತಿಸ್ಪರ್ಧಿಯಾದ ಮಿಟ್ ರಾಮ್ನಿ ಗೆಲ್ಲುವ ಸಾಧ್ಯತೆ ಶೇಕಡ 50 ರಷ್ಟು ಇದೆ. ಇಲ್ಲಿ ಅಧ್ಯಕ್ಷರ ಚುನಾವಣೆ, ನಾಲ್ಕು ವರ್ಷಗಳಿಗೊಮ್ಮೆ ನವಂಬರ್ ತಿಂಗಳ ಮೊದಲ ಮಂಗಳವಾರದಂದು ನಡೆಯುತ್ತದೆ. ನಮ್ಮಲ್ಲಿ ಹಬ್ಬಹರಿದಿನಗಳು ಹೇಗೆ ವರ್ಷದಲ್ಲಿ ನಿರ್ದಿಷ್ಟ ದಿನಾಂಕದಂದು ನಡೆಯುತ್ತವೆಯೋ ಹಾಗೆ. ಮರುಚುನಾವಣೆಗಳ ಹಾವಳಿ ಇಲ್ಲ.

ಅಮೇರಿಕೆಯ ಅಧ್ಯಕ್ಷ ನೇರವಾಗಿ ಜನರಿಂದ ಆಯ್ಕೆಗೊಂಡರೂ ಸರ್ವಾಧಿಕಾರಿಯಂತೆ ವರ್ತಿಸಲು ಅವಕಾಶವಿಲ್ಲ. ಅವನು ತನ್ನ ಆಡಳಿತ ನಿರ್ವಹಣೆಗಾಗಿ ಆಯ್ಕೆಮಾಡಿಕೊಳ್ಳುವ ಸಚಿವಸಂಪುಟವು (ಇಲ್ಲಿ ಅವರನ್ನು ಮಂತ್ರಿಗಳು ಎನ್ನುವುದಿಲ್ಲ, ಕಾರ್ಯದರ್ಶಿಗಳು ಎನ್ನುತ್ತಾರೆ) ಸೆನೆಟ್‌ನಲ್ಲಿ ಅನುಮೋದನೆಗೊಳಬೇಕು. ಸಾಮಾನ್ಯವಾಗಿ ಆಯಾಯ ಪಕ್ಷದ ಸದಸ್ಯರು ತಮ್ಮ ಪಕ್ಷದ ರೀತಿನೀತಿಗಳನ್ನು ಬೆಂಬಲಿಸಿದರೂ ಪಕ್ಷದ ನಿರ್ಧಾರಕ್ಕೆ ವಿರುದ್ಧವಾಗಿ ಓಟು ಮಾಡುವ ಸ್ವಾತಂತ್ರ್ಯ ಸದಸ್ಯರಿಗೆ ಇದೆ. ಪಕ್ಷದಿಂದ ಸದಸ್ಯರಿಗೆ ಯಾವುದೇ ವಿಪ್ ನೀಡುವ ಪದ್ಧತಿ ಇರುವುದಿಲ್ಲ. ನಮ್ಮ ದೇಶದ ರಾಜ್ಯಸಭೆಗೆ ಹೋಲಿಸಬಹುದಾದ ಇಲ್ಲಿಯ ಸೆನೆಟ್‌ನಲ್ಲಿ ಅಧ್ಯಕ್ಷರ ಪಕ್ಷದವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆಂದು ಹೇಳಲು ಸಾಧ್ಯವಿಲ್ಲ. ಸಂಪುಟಕ್ಕೆ ಸೇರ್ಪಡೆಯಾಗುವವರು ಸೆನೆಟರ್‌ಗಳೂ ಅಲ್ಲ, ಅವರು ಚುನಾಯಿತ ಪ್ರತಿನಿಧಿಗಳೇ ಆಗಬೇಕೆಂದೇನೂ ಇಲ್ಲ; ಆಯಾಯ ಖಾತೆಯ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ರಂಗದಲ್ಲಿರುವ ಪರಿಣತರು ಯಾರಾದರೂ ಆಗಬಹುದು. ಈ ಪದ್ಧತಿಯನ್ನು ನಮ್ಮ ದೇಶದ ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಜಾರಿಗೆ ತಂದರೆ ಮಂತ್ರಿಪದವಿಗಾಗಿ, ಖಾತೆಗಾಗಿ ಕ್ಯಾತೆ ತೆಗೆಯುವ ಮತ್ತು ಸರಕಾರವನ್ನು ಅಸ್ಥಿರಗೊಳಿಸುವ ಹುನ್ನಾರ ತಪ್ಪಬಹುದು ಎನಿಸುತ್ತದೆ. ಇದರಿಂದ ಮುಖ್ಯಮಂತ್ರಿ/ಪ್ರಧಾನಮಂತ್ರಿ ತನ್ನ ಕುರ್ಚಿಯ ಭದ್ರತೆಗಾಗಿ ಸದಾ ಕಾಲ ಚಿಂತಾಕ್ರಾಂತನಾಗದೆ ಜನಹಿತ ಕಾರ್ಯಗಳನ್ನು ಮಾಡುವತ್ತ ಮುಂದಾಗಬಹುದು.

ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಸುಮಾರು 150 ವರ್ಷಗಳವರೆಗೂ ಮಹಿಳೆಯರಿಗೆ ಓಟು ಮಾಡುವ ಅಧಿಕಾರ ಇರಲಿಲ್ಲ. ಅದಕ್ಕಾಗಿ ಮಹಿಳಾ ಸಂಘಟನೆಗಳು ಹೋರಾಟ ಮಾಡಿದವು. 1920 ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಮಹಿಳೆಯರಿಗೆ ಓಟಿನ ಹಕ್ಕನ್ನು ನೀಡಲಾಯಿತು. ಕರಿಯರು ಮತ್ತು ಬಿಳಿಯರು ಎಂಬ ವರ್ಣಭೇದ ಪ್ರಬಲವಾಗಿದ್ದ ಈ ದೇಶದಲ್ಲಿ ಕರಿಯರಿಗೆ 100 ವರ್ಷಗಳ ನಂತರ ಓಟಿನ ಅಧಿಕಾರ ಸಿಕ್ಕರೆ 150 ವರ್ಷಗಳ ನಂತರ ಮಹಿಳೆಯರಿಗೆ ಓಟಿನ ಹಕ್ಕು ದೊರೆಯಿತು ಎನ್ನುವುದು ಇಲ್ಲಿ ಗಮನಾರ್ಹ ಸಂಗತಿ.

ಭಾರತದಿಂದ ಇಲ್ಲಿಗೆ ವಲಸೆ ಬಂದ ಹಿರಿಯ ಪೀಳಿಗೆಯವರಿಗೆ ಇಲ್ಲಿ ನೆಲೆಯಾಗಿ ನಿಲ್ಲುವುದೇ ಒಂದು ದೊಡ್ಡ ಸವಾಲಾಗಿತ್ತು. ತಮ್ಮ ಮಕ್ಕಳಿಗೆ ಇಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣವನ್ನು ಕೊಡಿಸುವುದೇ ಅವರ ಜೀವನದ ಮೊದಲ ಆದ್ಯತೆಯಾಗಿತ್ತು. ಆದರೆ ಅನಿವಾಸಿ ಭಾರತೀಯರ ಮಕ್ಕಳು ಇಲ್ಲಿಯೇ ಹುಟ್ಟಿ ಬೆಳೆದು ದೊಡ್ಡವರಾಗಿ ಈಗ ಅಮೇರಿಕೆಯ ರಾಜಕಾರಣದಲ್ಲಿ ಸಕ್ರಿಯವಾಗಿ ಧುಮ್ಮಿಕ್ಕಿ ರಾಜಕೀಯ ಸ್ಥಾನಮಾನಗಳನ್ನು ಪಡೆಯತೊಡಗಿದ್ದಾರೆ. ಈಗ ಸುಮಾರು 31 ಲಕ್ಷ ಅನಿವಾಸಿ ಭಾರತೀಯರು ಇಲ್ಲಿದ್ದಾರೆ. ಅಮೇರಿಕಾದ ಜನಸಂಖ್ಯೆಯ ಶೇ. 1 ರಷ್ಟು ಇದ್ದರೂ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸದೃಢತೆಯನ್ನು ಸಾಧಿಸುವುದರ ಜೊತೆಗೆ ರಾಜಕೀಯವಾಗಿಯೂ ಬೆಳೆಯುತ್ತಿದ್ದಾರೆ.

- 2 -

ಪ್ರಜಾಪ್ರಭುತ್ವ ಇರುವುದು ಸಿರಿವಂತರಿಗೆ ಮಾತ್ರ. "It is for sale to the highest bidder". ಹರಾಜಿನಲ್ಲಿ ಹೆಚ್ಚು ಕೂಗಿದವರಿಗೆ ಹೇಗೆ ಸಿಕ್ಕುತ್ತದೆಯೋ ಹಾಗೆ ರಾಜಕೀಯ ಸ್ಥಾನಮಾನಗಳು ಹಣವುಳ್ಳವರಿಗೆ ಮಾತ್ರ ದಕ್ಕುತ್ತವೆ ಎಂಬ ಆಪಾದನೆ ಇಲ್ಲಿಯೂ ಇದೆ. ಹೀಗೆ ಅಭ್ಯರ್ಥಿಗಳ ಸೋಲುಗೆಲುವಿನಲ್ಲಿ ಹಣದ ಪಾತ್ರ ಬಹಳವಾಗಿದೆ ಎಂದರೂ ಆ ಹಣವನ್ನು ಚುನಾವಣಾ ಪ್ರಚಾರಕ್ಕಾಗಿ ಮಾತ್ರ ಖರ್ಚುಮಾಡಲಾಗುತ್ತದೆಯೇ ಹೊರತು ಮತದಾರರಿಗೆ ಆಮಿಷ ಒಡ್ಡಲು ಅಲ್ಲ. ಆದರೂ ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕಾಗಿ ಖರ್ಚುಮಾಡುವ ಹಣ ಜನರ ಮೇಲೆ ಪ್ರಭಾವ ಬೀರದಂತೆ ಚುನಾವಣಾ ನಿಯಮಗಳನ್ನು ಬಿಗಿಗೊಳಿಸುವ ಪ್ರಯತ್ನ ನಡೆದಿದೆ. ಅಭ್ಯರ್ಥಿಗಳು ಚುನಾವಣೆಯಲ್ಲಿ ಮಾಡುವ ಖರ್ಚಿನ ವಿವರಗಳನ್ನು ಕೊಡಬೇಕು. ತಮಗೆ ಸಾರ್ವಜನಿಕರಿಂದ ಬಂದ ವಂತಿಗೆಯ ವಿವರಗಳನ್ನು ಸಲ್ಲಿಸಬೇಕು.

ಒಂದು ಕಾಲದಲ್ಲಿ ಅಮೇರಿಕೆಯ ಚುನಾವಣೆಗಳಲ್ಲಿಯೂ ಭ್ರಷ್ಟಾಚಾರವಿತ್ತು ಎಂದು ಹೇಳುತ್ತಾರೆ. ಇದೇನು ವಾಸ್ತವವೋ ಎರಡು ಪಕ್ಷಗಳ ಮಧ್ಯೆ ಇರುವ ರಾಜಕೀಯ ವೈಷಮ್ಯವೋ ಗೊತ್ತಿಲ್ಲ. ಒಮ್ಮೆ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿ ಪ್ರತಿಯೊಬ್ಬ ಮತದಾರನಿಗೂ ತಲಾ 50 ಡಾಲರ್ ಕೊಟ್ಟು ತನಗೆ ಓಟು ಹಾಕಬೇಕೆಂದು ಮನವಿಮಾಡಿಕೊಂಡನಂತೆ. ಇದು ಗೊತ್ತಾಗಿ ಅವನ ಎದುರಾಳಿಯಾದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಮತದಾರರಿಗೆ ತಲಾ 100 ಡಾಲರ್ ಕೊಟ್ಟು ಹೆಚ್ಚಿನ ಆಮಿಷ ತೋರಿಸಿ ತನಗೆ ಓಟು ಮಾಡಬೇಕೆಂದು ಕೇಳಿಕೊಂಡನಂತೆ. ಮತದಾರರು ಇಬ್ಬರಿಂದಲೂ ಹಣವನ್ನು ಪಡೆದರು. ಆದರೆ ಚುನಾವಣೆಯ ಫಲಿತಾಂಶ ಹೊರಬಿದ್ದಾಗ ಹೆಚ್ಚಿನ ಹಣ ಕೊಟ್ಟಿದ್ದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಸೋತಿದ್ದ! ಕಡಿಮೆ ಹಣ ಕೊಟ್ಟಿದ್ದ ಡೆಮೋಕ್ರಾಟಿಕ್ ಪಕ್ಷದ ಅಭ್ಯರ್ಥಿ ಗೆದ್ದಿದ್ದ. ಹೆಚ್ಚು ದುಡ್ಡು ಕೊಟ್ಟವರಿಗೆ ಓಟು ಹಾಕುವುದನ್ನು ಬಿಟ್ಟು ಕಡಿಮೆ ದುಡ್ಡು ಕೊಟ್ಟವನಿಗೆ ಏಕೆ ಓಟು ಹಾಕಿದಿರಿ ಎಂದು ಮಾಧ್ಯಮದವರು ಕೇಳಿದಾಗ ಜನ ಕೊಟ್ಟ ಉತ್ತರ: "Because, he is less corrupt!"

ಅಟ್ಲಾಂಟಾ
13.9.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ